ದೂರದಲ್ಲಿ ಎದ್ದು ಬಿಟ್ಟವು. ಹೀಗಾಗಿ ಹಸುಗಳನ್ನು ಕಟ್ಟುವ ಕೊಟ್ಟಿಗೆ ಕಿಷ್ಕಿಂದೆಯಂತಾಯಿತು. ಅಲ್ಲದೇ ಅವುಗಳನ್ನು ಹೊರಗೆ ಕರೆದೊಯ್ಯಲು ಸುತ್ತಿ ಬಳಸಿ ಬರುವಂತಾಯಿತು. ಹಸು ಕರುಗಳ ಆರೈಕೆ ಬಹುತೇಕ ಭಾಗೀರಥಿಯನ್ನೇ ಅವಲಂಬಿಸಿದ್ದ ಕಾರಣಕ್ಕೆ ಆಕೆಗೆ ಕೋಪ ನೆತ್ತಿಗೆ ಏರಿ ಹೋಯಿತು. ಇದ್ದ ಹತ್ತಾರು ಹಸು ಕರುಗಳು ತೀರಾ ಇಕ್ಕಟ್ಟಿನ ಜಾಗದಲ್ಲಿ ಒದ್ದಾಡುವುದ ಕಂಡು ಅವಳ ಮನಸ್ಸು ವ್ಯಗ್ರವಾಗಿ ಹೋಯಿತು. ಒಂದು ದಿನ ಮುಂಜಾವಿನಲ್ಲಿ ಸ್ವಾಮಿಗಳು ಯಾರೂ ನೋಡದ ಅಮೃತ ಮುಹೂರ್ತದಲ್ಲಿ ಕಕ್ಕಸ್ಸು ಮನೆಗೆ ಹೋಗುವಾಗ ಬೆನ್ನ ಹಿಂದಿನಿಂದ, ‘ಅದೇನು ನೀವು ಯಾರು ಹೇಲದ್ದು ಹೇಲ್ತೀರೋ’ ಎಂದುಬಿಟ್ಟಳು. ಸ್ವಾಮಿಗಳು ನಖಶಿಖಾಂತ ನಡುಗಿ ಹೋದರು. ಯಾರೂ ಪ್ರಶ್ನಿಸದ ತಮ್ಮನ್ನು ಹೆಣ್ಣೊಬ್ಬಳು ಪ್ರಶ್ನಿಸಿದ್ದು ಅವರಿಗೆ ಕೊಂಚವೂ ಸರಿ ಅನ್ನಿಸಲಿಲ್ಲ. ಅದೂ ಅಲ್ಲದೆ ಅಂತಹ ಅಗೋಚರ ಸ್ಥಿತಿಯಲ್ಲಿ. ಗಡಿಬಿಡಿಯಲ್ಲಿ ಎಲ್ಲದನ್ನೂ ಮುಗಿಸಿದವರೇ ಇನ್ನು ಈ ಮನೆಯಲ್ಲಿ ತಾನು ಇರುವುದು ಸಾಧ್ಯವೇ ಇಲ್ಲ ಎನ್ನುವ ಫರ್ಮಾನು ಹೊರಡಿಸಿದರು. ಆದರೆ ಮನೆಯವರೆಲ್ಲ ಸೇರಿ ಸ್ವಾಮಿಗಳ ಕಾಲಿಗೆ ಬಿದ್ದು ಕ್ಷಮಾಪಣೆ ಕೇಳಿದ ಮೇಲೆ ಸ್ವಾಮಿಗಳು ಮತ್ತೆರಡು ದಿನ ಆ ಮನೆಯಲ್ಲಿ ಪಾದ ಪೂಜೆಯನ್ನು ನಡು ನಡುಗುತ್ತಲೇ ಮಾಡಿಸಿಕೊಂಡರು. ಆದರೆ ಅಲ್ಲಿದ್ದಷ್ಟು ದಿನವೂ ಒಬ್ಬರೇ ಶೌಚಕ್ಕೆ ಹೋಗುವ ಪ್ರಯತ್ನ ಮಾಡಲಿಲ್ಲ. ತೀರಾ ನಸುಗತ್ತಲೆಯಲ್ಲಿ ಹೋಗುವಾಗಲೂ ಯಾರಾದರೂ ಒಬ್ಬರು ಶಿಷ್ಯರನ್ನು ಜೊತೆಯಲ್ಲಿ ಇರಿಸಿಕೊಂಡೇ ತಮ್ಮ ಮಡಿಯನ್ನು, ಮಾನವನ್ನು ಕಾಪಾಡಿಕೊಂಡರು...

ಇದಾದ ಸ್ವಲ್ಪ ವರ್ಷಗಳ ಅಂತರದಲ್ಲಿ ಮನೆಯ ಸಂಪೂರ್ಣ ವಹಿವಾಟು ಶಾರದೆಯ ಅಜ್ಜನ ಕೈಯಿಂದ ಹೊರಟು ಐವರು ಮಕ್ಕಳ ಕೈಗೆ ದಾಟಿತ್ತು. ಸುಮಾರು ಐವತ್ತು ಎಕರೆ ಗದ್ದೆ ಮತ್ತು ಇಪ್ಪತ್ತೆಂಟು ಎಕರೆ ಅಡಿಕೆ ತೋಟ ನಲವತ್ತೈದು ಎಕರೆ ಕಾಫಿ ಎಸ್ಟೇಟು ಎಲ್ಲವೂ ಐದು ಭಾಗಗಳಾಗಿದ್ದವು. ಮನೆಯ ಮಧ್ಯದಲ್ಲಿ ಐದು ಗೋಡೆಗಳು ಮಧ್ಯೆ ಮಧ್ಯದಲ್ಲಿ ಎದ್ದು ನಿಂತಿದ್ದವು. ಮನೆಯ ಮುಂದಿನ ಸೂರು ಒಂದೇ ಎನ್ನಿಸಿದರೂ ಒಳಗೆ ಬೇಯುತ್ತಿದ್ದ ಅನ್ನ, ಸಾರು, ಗೊಜ್ಜು, ಪಲ್ಯ ಎಲ್ಲವೂ ಬೇರೆ ಬೇರೆಯೇ. ಅಕ್ಕಿ ತುಂಬುವ ಪಿಟಾರಿ, ಹುಲ್ಲುಮೆದೆಯ ಪಣ್ತ ತಟ್ಟೆ, ಲೋಟ, ಚೊಂಬು, ಹಸುಗಳು, ನಾಯಿಗಳು ಎಲ್ಲವೂ ಗಡಿ ರೇಖೆ ಹಾಕಿಕೊಂಡವು. ಇನ್ನು ಅಲ್ಲೇ ಉಳಿದ ಭಾಗೀರಥಿ ತರಹದ ದಿಕ್ಕಿಲ್ಲದ ಜೀವಗಳು ನಿಧಾನಕ್ಕೆ ಅಜ್ಜಯ್ಯನಿಗೆ ನಮಸ್ಕರಿಸಿ ತಮ್ಮ ದಾರಿ ನೋಡಿಕೊಂಡಿದ್ದವು. ಒಂದೆರಡು ಜೀವಗಳು ಅಲ್ಲೇ ಇದ್ದ ಮಠದಲ್ಲಿ ಹೋಗಿ ಸೇರಿಕೊಂಡವು. ಭಾಗೀರಥಿ ಮಾತ್ರ ಎಲ್ಲಿಗೆ ಹೋಗಲಿಕ್ಕೂ ಸುತಾರಾಂ ಸಿದ್ಧಳಿರಲಿಲ್ಲ. ಅಜ್ಜಯ್ಯ ಮತ್ತು ಅಜ್ಜಮ್ಮನನ್ನು ಬಿಟ್ಟು ತಾನು ಎಲ್ಲಿಗೂ ಹೋಗಲಾರೆ ಎಂಬುದು ಆಕೆಯ ಕಟ್ಟ ಕಡೆಯ ವಾಕ್ಯವಾಗಿತ್ತು. ಅವಳ ಈ ನಿರ್ಣಯದ ಪರಿಣಾಮವೆಂದರೆ ಆಕೆ ಐದು ಮನೆಯಲ್ಲಿ ಏಕಚಿತ್ತವಾಗಿ ದುಡಿಯುವ ಪರಿಸ್ಥಿತಿ ಬಂದು ಹೋಯಿತು. ಆದರೂ ಆಕೆಗೆ ಬೇಸರವಿದ್ದದ್ದು ಎದ್ದ ಗೋಡೆಗಳ ಬಗ್ಗೆಯೇ ಹೊರತು, ಮಂದಿಯ ಬಗ್ಗೆ ಆಗಿರಲಿಲ್ಲ. ಅವಳ ಸ್ಥಿತಿ ಹೇಗಿತ್ತು ಎಂದರೆ ಸೊಂಟದಲ್ಲಿ ಇರುವೆ ಬಿಟ್ಟುಕೊಂಡವಳ ಹಾಗಿತ್ತು. ಯಾರ ಮನೆಯಲ್ಲಿಯೂ ತುಸು ಹೊತ್ತು ಕೂರುವಂತಿರಲಿಲ್ಲ. ನಿಲ್ಲುವಂತಿರಲಿಲ್ಲ. ದುಡಿಯುತ್ತಲೇ ಇರಬೇಕಿತ್ತು. ಇಲ್ಲದೆ ಹೋದಲ್ಲಿ, ‘ನೀನು ಅವರ ಮನೆಯಲ್ಲಾದರೆ ಚಂದ ಕೆಲಸ ಮಾಡ್ತಿ ನೋಡು’ ಎನ್ನುತ್ತ ಪ್ರತಿಯೊಬ್ಬರೂ ಮೂಗು ಮುರಿಯುತ್ತಿದ್ದರು. ಇಷ್ಟಾದರೂ ಆಕೆ ಒಂದು ದಿನದ ಮಟ್ಟಿಗೂ ಈ ಮನೆಯ ವಿಷಯವನ್ನು ಆ ಮನೆಗೆ ಮುಟ್ಟಿಸುವುದಾಗಲಿ. ಅಲ್ಲಿಂದ ಇಲ್ಲಿಗೆ ರಗಳೆಗಳ ತಂದಿಟ್ಟು